



ಅರುಣ ಪಿ. ಭಟ್ಟ

## ವಾರಭವಿಷ್ಯ: 04.05.2023ದಿಂದ 10.05.2023ವರೆಗೆ


ಮೇಷ

ಮನೆಯ ದುರಸ್ತಿ, ನವೀಕರಣಕ್ಕೆ ಹಣ ಖರ್ಚು ಮಾಡುವ ಸಾಧ್ಯತೆ ಇದೆ. ದಾನ ಧರ್ಮ ಕಾರ್ಯಗಳಲ್ಲಿ ಆಸಕ್ತಿ ಮೂಡುತ್ತದೆ. ದೊಡ್ಡ ಮಟ್ಟದ ಅಧಿಕಾರಿಗಳು ಜತೆಗೆ ಮಾತುಕತೆ ನಡೆಸುವ ಯೋಗ ಇದೆ. ಸೋದರ ಸೋದರಿಯರ ಜತೆಗೆ ಬಾಂಧವ್ಯ ಗಟ್ಟಿಯಾಗುತ್ತದೆ. ಸಾಮಾಜಿಕ ಸ್ಥಾನಮಾನ ಉತ್ತಮವಾಗುತ್ತದೆ. ಇಡೀ ವಾರ ಆರೋಗ್ಯದಲ್ಲಿ ಏರಿಳಿತ ಇರುತ್ತದೆ. ಶುಭದಿನ 09. ಸೌಂದರ್ಯ ಲಹರಿ ಪಠಿಸಿರಿ.


ವೃಷಭ

ಹಣಕಾಸು ವ್ಯವಹಾರದಲ್ಲಿ ಪ್ರಗತಿ. ನಿಮ್ಮ ಸಮಸ್ಯೆಗಳನ್ನು ಇತರರ ನೆರವಿನಿಂದ ಬಗೆಹರಿಸಿಕೊಳ್ಳಬಹುದು. ಪ್ರೀತಿಪಾತ್ರರ ಜೊತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ವೃತ್ತಿಪರರಿಗೆ ಕೆಲಸ ಕಾರ್ಯಗಳಲ್ಲಿ ಒತ್ತಡ ಇರಲಿದೆ. ಅನಗತ್ಯ ವಿವಾದಗಳಲ್ಲಿ ನಿಮ್ಮನ್ನು ವಿರೋಧಿಗಳು ಎಳೆಯುವ ಸಾಧ್ಯತೆ ಇದೆ. ಸಕಾರಾತ್ಮಕ ಚಿಂತನೆಯಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಿರಿ. ಶುಭದಿನ 06. ಹನುಮಾನ್ ಚಾಲೀಸ್ ಓದಿರಿ.


ಮಿಥುನ

ಸಂತಾನ ಅಪೇಕ್ಷಿತ ದಂಪತಿಗೆ ಶುಭ ಸುದ್ದಿ ಕೇಳುವ ಯೋಗ ಇದೆ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ರಂಗದಲ್ಲಿ ಪ್ರಗತಿ ಇದೆ. ಹಿರಿಯರು, ಅನುಭವಿಗಳ ನೆರವು ಮತ್ತು ಮಾರ್ಗದರ್ಶನ ದೊರೆಯಲಿದೆ. ಹೆಚ್ಚುವರಿ ಆದಾಯವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಸೂಕ್ತ ವೇದಿಕೆ ದೊರೆಯಲಿದೆ. ಅನಗತ್ಯ ವಾಗ್ವಾದಗಳನ್ನು ಎಳೆದು ತರಬಹುದು. ಶುಭದಿನ 09. ಶ್ರೀ ದತ್ತಗುರು ಸ್ತೋತ್ರ ಪಠಿಸಿರಿ.


ಕಟಕ

ವೃತ್ತಿ ಸೇವಾ ವಲಯದಲ್ಲಿ ಇರುವವರಿಗೆ ಅಂದುಕೊಂಡಂತಹ ಫಲಿತಾಂಶ ದೊರೆಯಲಿದೆ. ನಿಮ್ಮ ಯೋಜನೆಗಳಿಗೆ ಸಂಬಂಧಿಸಿದಂತೆ ಮೇಲಧಿಕಾರಿಗಳ ಜೊತೆ ಮುಖ್ಯವಾದ ಚರ್ಚೆಯಲ್ಲಿ ತೊಡಗಿಕೊಳ್ಳಲಿದ್ದೀರಿ. ಈ ಹಿಂದಿನ ಆರೋಗ್ಯ ಸಮಸ್ಯೆಗಳು ನಿವಾರಣೆ ಆಗುವ ಯೋಗ ಇದೆ. ಆರ್ಥಿಕ ಸ್ಥಿತಿ ಉತ್ತಮ ಆಗಲಿದೆ. ಆತ್ಮೀಯರೊಂದಿಗೆ ಭಿನ್ನಾಭಿಪ್ರಾಯಗಳು ಕಾಣಿಸಿಕೊಳ್ಳಬಹುದು. ಶುಭದಿನ 08. ಲಿಂಗಾಷ್ಟಕ ಪಠಿಸಿರಿ.


ಸಿಂಹ

ನೀವು ಕೆಲಸ ಮಾಡುತ್ತಿರುವ ಸಂಸ್ಥೆಯಲ್ಲಿ ಗೌರವಕ್ಕೆ ಪಾತ್ರವಾಗುವ ಯೋಗ ಇದೆ. ಈ ಅವಧಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶ ಇದೆ. ವೃತ್ತಿಪರ ಕೆಲಸಗಳನ್ನು ಈ ಹಿಂದಿಗಿಂತಲೂ ಪರಿಣಾಮಕಾರಿಯಾಗಿ ಮಾಡುವಿರಿ. ವ್ಯಾಪಾರಸ್ಥರು ವ್ಯವಹಾರಸ್ಥರಿಗೆ ಒಂದೊಳ್ಳೆ ವ್ಯಾವಹಾರಿಕ ಸಂಪರ್ಕ ದೊರೆಯಲಿದೆ. ಶುಭದಿನ 07. ಕಾಲಭೈರವನ ಸೇವೆ ಮಾಡಿರಿ.


ಕನ್ಯಾ

ಕುಟುಂಬ ಸದಸ್ಯರು, ಬಂಧುಗಳೊಂದಿಗೆ ಉತ್ತಮವಾದ ಕ್ಷಣಗಳನ್ನು ಕಳೆಯಲಿದ್ದೀರಿ. ಕಾನೂನು ವ್ಯಾಜ್ಯಗಳು ಇದ್ದಲ್ಲಿ ಅದರಲ್ಲಿ ನಿಮ್ಮ ಪರವಾದ ಬೆಳವಣಿಗೆಗಳು ಆಗಲಿವೆ. ಸರಿಯಾದ ಸಮಯಕ್ಕೆ ವಿರೋಧಿಗಳಿಗೆ ತಕ್ಕ ಪ್ರತ್ಯುತ್ತರ ನೀಡಲಿದ್ದೀರಿ. ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ಇರುವವರಿಗೆ ಮನ್ನಣೆ ಸಿಗಲಿದೆ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ಶುಭದಿನ 08. ಶ್ರೀ ಲಕ್ಷ್ಮೀಕನಕಧಾರಾ ಸ್ತೋತ್ರ ಪಠಣ ಮಾಡಿರಿ.


ತುಲಾ

ವೈವಾಹಿಕ ಜೀವನ ಚೆನ್ನಾಗಿರುತ್ತದೆ. ಸಂಗಾತಿ, ಮಕ್ಕಳಿಗೆ ಇರುವ ಭಿನ್ನ ಆಲೋಚನೆಗಳನ್ನು ಸಹ ಒಂದು ಹಂತಕ್ಕೆ ಸರಿಪಡಿಸುವಿರಿ. ಮದುವೆ ಸಂಬಂಧ ಹುಡುಕುತ್ತಿದ್ದವರಿಗೆ ಸೂಕ್ತ ಸಂಬಂಧ ದೊರೆಯಲಿದೆ. ವೃತ್ತಿನಿರತರಿಗೆ ಅಂದುಕೊಂಡ ಹುದ್ದೆಯನ್ನು ತಲುಪಿಕೊಳ್ಳುವ ಅವಕಾಶ ಇದೆ. ಕೌಶಲದ ಮೂಲಕ ಯಶಸ್ಸು ಪಡೆಯುವ ಅವಕಾಶ ಇದೆ. ಶುಭದಿನ 09. ವಿಷ್ಣು ಸಹಸ್ರನಾಮ ಪಠಿಸಿರಿ.


ವೃಶ್ಚಿಕ

ವೃತ್ತಿಪರ ಜೀವನದಲ್ಲಿ ಅತ್ಯುತ್ತಮ ಪ್ರಗತಿ ಇದೆ. ಹಣಕಾಸು ಹೂಡಿಕೆ ವ್ಯವಹಾರದಲ್ಲಿ ಅಂದುಕೊಂಡಂತೆ ಸಾಧಿಸುವಿರಿ. ವಿರೋಧಿಗಳು ಸಣ್ಣಪುಟ್ಟ ಸಮಸ್ಯೆಗಳನ್ನು ಮಾಡಬಹುದು. ಸಂತೋಷವಾಗಿರುವುದಕ್ಕೆ ಬಹಳ ಶ್ರಮ ವಹಿಸುತ್ತೀರಿ. ಉದ್ಯೋಗ ಸ್ಥಳದಲ್ಲಿ ಸಹೋದ್ಯೋಗಿಗಳ ಜತೆಗೆ ಉತ್ತಮ ಬಾಂಧವ್ಯ ಇರುತ್ತದೆ. ಆರೋಗ್ಯ ಸಮಸ್ಯೆ ಕಾಡಬಹುದು. ಶುಭದಿನ 10. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.


ಧನಸ್ಸು

ವ್ಯಾಪಾರ ಕ್ಷೇತ್ರದಲ್ಲಿ ಇರುವವರಿಗೆ ಏಳ್ಗೆ ಇದೆ. ಹಣಕಾಸು ಹೂಡಿಕೆಯಲ್ಲಿ ಅಂದುಕೊಂಡಂಥ ಫಲಿತಾಂಶ ದೊರೆಯಲಿದೆ. ಸೋದರ ಸಂಬಂಧಿಗಳ ಜೊತೆಗಿನ ಬಾಂಧವ್ಯ ಗಟ್ಟಿಯಾದಲಿದೆ. ಈ ಹಿಂದಿನ ಮನಸ್ತಾಪಗಳು ಇದ್ದರೂ ನಿವಾರಣೆ ಆಗುತ್ತದೆ. ವ್ಯಾಪಾರ ವ್ಯವಹಾರದಲ್ಲಿ ತೊಡಗಿರುವವರಿಗೆ ಉನ್ನತ ಸ್ಥಾನಮಾನಗಳು ದೊರೆಯಲಿವೆ. ಶುಭದಿನ 07. ಗುರು ರಾಘವೇಂದ್ರ ರಾಯರ ಆರಾಧನೆ ಮಾಡಿರಿ


ಮಕರ

ಭೂಮಿ ಖರೀದಿ ವಿಚಾರದಲ್ಲಿ ಅಂದುಕೊಂಡಂತೆ ಬೆಳವಣಿಗೆಗಳು ಆಗಲಿವೆ. ಮನೆ ದುರಸ್ತಿ, ಅಲಂಕಾರಕ್ಕೆ ಹೆಚ್ಚಿನ ಖರ್ಚು ಮಾಡಲಿದ್ದೀರಿ. ಪೋಷಕರ ಜತೆಗಿನ ಬಾಂಧವ್ಯ ಇನ್ನಷ್ಟು ಗಟ್ಟಿಯಾಗುತ್ತದೆ. ಮಕ್ಕಳು ಕೌಶಲವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಹಾಯ ಮಾಡಲಿದ್ದೀರಿ. ವೈಯಕ್ತಿಕ ಸಂಬಂಧದಲ್ಲಿ ಈ ಹಿಂದೆಂದಿಗಿಂತ ಹೆಚ್ಚು ಅಕ್ಕರೆ ಇರುತ್ತದೆ. ಶುಭದಿನ 10. ಶಿವಕವಚ ಪಠಣ ಮಾಡಿರಿ.


ಕುಂಭ

ಸಾಮಾಜಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಹೆಸರು, ಕೀರ್ತಿ ದೊರೆಯುತ್ತದೆ. ಯಾವುದೇ ಕೆಲಸಕ್ಕೆ ಹೆಚ್ಚು ಶ್ರಮ ಹಾಕಬೇಕಾಗುತ್ತದೆ. ಸೇವೆ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಇರುವವರಿಗೆ ಅಂದುಕೊಂಡಂಥ ಫಲಿತಾಂಶ ದೊರೆಯಲಿದೆ. ಯಾವ ಸಂಸ್ಥೆಯಲ್ಲಿ ಉದ್ಯೋಗ ಗಿಟ್ಟಿಸಬೇಕು ಎಂಬ ಇಚ್ಛೆ ಇರುತ್ತದೋ ಅಲ್ಲಿಂದ ಅವಕಾಶ ದೊರೆಯಲಿದೆ. ಶುಭದಿನ 08. ಆದಿತ್ಯ ಹೃದಯ ಪಠಣ ಮಾಡಿರಿ.


ಮೀನ

ಸ್ಥಿರಾಸ್ತಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ಪ್ರಗತಿ ಇದೆ. ಪೋಷಕರ ಜತೆಗೆ ಈ ಹಿಂದೆ ಮನಸ್ತಾಪಗಳು ಆಗಿದ್ದಲ್ಲಿ ಅವುಗಳನ್ನು ನಿವಾರಣೆ ಮಾಡಿಕೊಳ್ಳಲಿದ್ದೀರಿ. ಕುಟುಂಬದಲ್ಲಿನ ಒಗ್ಗಟ್ಟು ಎಷ್ಟು ಮುಖ್ಯ ಎಂಬ ವಿಚಾರ ನಿಮಗೆ ಮನದಟ್ಟಾಗುತ್ತದೆ. ಅದನ್ನು ಸಾಧಿಸಲು ನಾನಾ ದಾರಿಯನ್ನು ಕಂಡುಕೊಳ್ಳುತ್ತೀರಿ. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ಶುಭದಿನ 06. ಶ್ರೀರಾಮರಕ್ಷಾ ಸ್ತೋತ್ರ ಓದಿರಿ.